ಅ) ಮಂಡ್ಯದಲ್ಲಿ 'ಒಳಾಂಗಣ ಕ್ರೀಡಾಂಗಣ' ನಿರ್ಮಾಣ ಮಾಡಲು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೆ?

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿವಿಧ ಪ್ರಕಾರದ ರಸ್ತೆಗಳು

3272 (3970) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ಪ್ರಕಾರದ ರಸ್ತೆಗಳು ಎಷ್ಟು; ಪ್ರತಿಯೊಂದರ ಅಗಲ ಮತ್ತು ಉದ್ದ ಎಷ್ಟು; (ವಿವರಗಳನ್ನು ಕಿ.ಮೀ. ನಲ್ಲಿ ನೀಡುವುದು)

ಆ) ಈ ರಸ್ತೆಗಳಿಗೆ (ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ರಸ್ತೆ ಇತ್ಯಾದಿ) ಕಳೆದ 3 ವರ್ಷಗಳಿಂದ ನಿಗಧಿ ಮಾಡಿದ್ದ ಹಾಗೂ ಮೆಂಟೆನನ್ಸ್‌ಗಳಿಗೆ ವೆಚ್ಚ ಮಾಡಿದ ಹಣ ಎಷ್ಟು;

ಇ) 2000 ರಿಂದ 2003ರವರೆಗೆ ಪ್ರತಿ ತಾಲ್ಲೂಕಿನ ಪ್ರತಿ ರಸ್ತೆಗಳಿಗೆ ಎಷ್ಟು ಹಣ ನಿಗಧಿಪಡಿಸಲಾಗಿದೆ; 30-3-2003ರ ಅಂತ್ಯದವರೆಗೆ ಎಷ್ಟು ವೆಚ್ಚ ಮಾಡಲಾಗಿದೆ? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಗಲ ಮತ್ತು ಉದ್ದದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ.	ರಸ್ತೆಯ ವಿದ	ರಸ್ತೆಯ ಉದ್ದ ಕಿಮೀಗಳಲ್ಲಿ	ರಸ್ತೆಯ ಅಗಲ ಏಕಪಥ	ಮಧ್ಯವರ್ತಿ	ದ್ವಪಥ	ನಾಲ್ಕುಪಥ
1.	ರಾಷ್ಟ್ರೀಯ ಹೆದ್ದಾರಿ	3728	199	652	2289	588
2.	ರಾಜ್ಯ ಹೆದ್ದಾರಿ	9820	5831	3018	920	20
3.	ಜಿಲ್ಲಾ ಮುಖ್ಯ ರಸ್ತೆ	28247	26362	1743	142	–

ಆ) ಕಾಮಗಾರಿ ಚಾಲನೆಯಲ್ಲಿರುತ್ತದೆ.

ಕ್ರ. ಸಂ.	ರಸ್ತೆಯ ಹೆಸರು	200-2001 (ಲಕ್ಷ ರೂ.ಗಳಲ್ಲಿ) ನಿಗಧಿ ಪಡಿಸಿದ ಅನುದಾನ	ವೆಚ್ಚ	2001-2002 (ಲಕ್ಷ ರೂಗಳಲ್ಲಿ) ನಿಗದಿ ಪಡಿಸಿದ ಅನುದಾನ	ವೆಚ್ಚ	2002-2003 (ಲಕ್ಷ ರೂಗಳಲ್ಲಿ) ನಿಗಧಿ ಪಡಿಸಿದ ಅನುದಾನ	ವೆಚ್ಚ
1.	ರಾಷ್ಟ್ರೀಯ ಹೆದ್ದಾರಿ	1135.00	1144.49	1425.00	1510.45	977.00	981.89
2.	ರಾಜ್ಯ ಹೆದ್ದಾರಿ	2182.81	3180.79	797.23	1384.26	801.64	1005.38

1	2	3	4	5	6	7	8
3.	ಜಿಲ್ಲಾ ಮುಖ್ಯ ರಸ್ತೆ	22551.57	23155.21	17116.91 -	15294.77	25360.23	23452.97

ಇ) ವಿವರಗಳನ್ನು ಅನುಬಂಧ –1 ಹಾಗೂ 2 ರಲ್ಲಿ ಲಗತ್ತಿಸಿದೆ.

ಧಾರವಾಡದಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ

3273 (3971) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದಲ್ಲಿ ಜಿಲ್ಲಾ ನ್ಯಾಯಾಲಯ ಕಟ್ಟಡ ಪ್ರಾರಂಭಿಸಿದ್ದು ಯಾವಾಗ; ಇದಕ್ಕಾಗಿ ಈವರೆಗೆ ವೆಚ್ಚ ಮಾಡಿರುವ ಹಣದ ವಿವರ ನೀಡುವುದು;

ಆ) ಈ ಕಟ್ಟಡ ನಿರ್ಮಾಣ ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು. ಕಟ್ಟಡದ ಕಾಮಗಾರಿ ಪೂರ್ಣಗೊಳ್ಳದೇ ನ್ಯಾಯಾಲಯದ ಕೆಲಸಗಳಿಗೆ ಅಡಚಣೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಟ್ಟಡ ಕಾಮಗಾರಿಯ ಎಷ್ಟು ಭಾಗ ಮುಗಿದಿದೆ; ಇನ್ನು ಎಷ್ಟು ಬಾಕಿ ಇದೆ; ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ದಿನಾಂಕ : 7.10.1996 ರಂದು ಈ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಈ ಕಾಮಗಾರಿಗೆ ಇದುವರೆವಿಗೂ ರೂ. 388.15 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಆ) ಕಟ್ಟಡದ ಕಾಮಗಾರಿ ದಿನಾಂಕ: 6.5.2002 ರಂದು ಪೂರ್ಣಗೊಳ್ಳಬೇಕಾಗಿತ್ತು ಕಟ್ಟಡದ ಕಾಮಗಾರಿ ಪೂರ್ಣಗೊಳ್ಳದೇ ನ್ಯಾಯಾಲಯದ ಕೆಲಸಗಳಿಗೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕಟ್ಟಡದ ಕಾಮಗಾರಿಯು ಶೇಕಡ 85 ರಷ್ಟು ಭಾಗ ಪೂರ್ಣಗೊಂಡಿರುತ್ತದೆ. ಇನ್ನೂ ಶೇಕಡ 15 ರಷ್ಟು ಭಾಗ ಮಾತ್ರ ಬಾಕಿ ಇದೆ. ಈ ಕಾಮಗಾರಿಯನ್ನು ಮಾರ್ಚ್ 2004 ರ ಒಳಗೆ ಪೂರ್ಣಗೊಳಿಸಲಾಗುವುದು.

ಧಾರವಾಡ ನಗರದಲ್ಲಿ ಕೇಂದ್ರ ರಸ್ತೆ ನಿಧಿಯಿಂದ ಅನುಷ್ಠಾನಗೊಳ್ಳಬೇಕಾದ ರಸ್ತೆ ಕಾಮಗಾರಿಗಳು

3274 (3972) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದ ನಗರದ ರಸ್ತೆ ಕಾಮಗಾರಿಗಳನ್ನು ಸಿಆರ್ಎಫ್ ಹಣದಿಂದ ಪ್ರಾರಂಭಿಸಲು ಕೇಂದ್ರಕ್ಕೆ ಕಳುಹಿಸಿರುವ ವಿವರಗಳೇನು;

ಆ) ಪ್ರತಿ ಶಾಸಕರ ಕ್ಷೇತ್ರದಲ್ಲಿ ಸಿಆರ್ಎಫ್ ಹಣದಿಂದ ಈವರೆಗೆ ವಿವಿಧ ಕಾಮಗಾರಿಗಳು ಪೂರ್ಣಗೊಂಡಿರುವ ಹಾಗೂ ಆರಂಭವಾದ ಮತ್ತು ಮಂಜೂರಾದ ಕಾಮಗಾರಿಗಳ ವಿವರಗಳೇನು;